ಕರ್ನಾಟಕ ಸರ್ಕಾರ (ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ **(ಆರ್.ಪಿ.ಸಂಖ್ಯೆ 57)** ನಮೂನೆ ಸಂಖ್ಯೆ **4 (ಸಿವಿಲ್)** |

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊಸಕೋಟೆ
ಇವರ ನ್ಯಾಯಾಲಯದಲ್ಲಿ

**ಸಿ.ಸಿ.ನಂಬರ್ 1180-2015**

ಪಿ.ಡಬ್ಲು-6.
ಸಿ.ಡಬ್ಲು-7.

ಹೆಸರು : ಜಯರಾಮರೆಡ್ಡಿ
ತಂದೆಯ ಹೆಸರು : ವೆಂಕಟರಮಣಾರೆಡ್ಡಿ
ವಯಸ್ಸು : 62
ಉದ್ಯೋಗ : ನಿವೃತ್ತಿ
ವಾಸ ಸ್ಥಳ : ವೈಟ್ ಫೀಲ್ಡ್, ಬೆಂಗಳೂರು

ದಿ:02-12-2024 ರಂದು ಸತ್ಯ ಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರಿಂದ

ಚಾ.ಸಾ.1 ಮತ್ತು ಆರೋಪಿತರ ಪರಿಚಯ ಇದೆ.

ಪೊಲೀಸರು ನನ್ನನ್ನು ವಿಚಾರಿಸಿ ಯಾವುದೇ ಹೇಳಿಕೆ ಪಡೆದುಕೊಂಡಿರುವುದಿಲ್ಲ. 2014-15 ನೇ ಸಾಲಿನಲ್ಲಿ ದೊಡ್ಡದುನ್ನಸಂದ್ರ ಗ್ರಾಮದಲ್ಲಿರುವ ನನ್ನ ಮಾಲೀಕತ್ವದ ಅಂಗಡಿ ಮಾಳಿಗೆಯನ್ನು ಚಾ.ಸಾ.1 ರವರಿಗೆ ಬಾಡಿಗೆಗೆ ನೀಡಿದ್ದೆ. ಮತ್ತು ಆ ಕುರಿತು ಬಾಡಿಗೆ ಕರಾರು ಪತ್ರ ಮಾಡಲಾಗಿತ್ತು. ನನಗೆ ಪ್ರಸ್ತುತ ಪ್ರಕರಣದ ಕುರಿತು ನನಗೆ ಯಾವುದೇ ಮಾಹಿತಿ ಇರುವುದಿಲ್ಲ.

ಈಗ ನನಗೆ ತೋರಿಸಿದ ದಾಖಲೆ ಚಾ.ಸಾ.೧ ರವರಿಗೆ ಮಾಡಿಕೊಟ್ಟ ಅಂಗಡಿ ಬಾಡಿಗೆ ಕರಾರು ಪತ್ರ ಆಗಿರುತ್ತದೆ. ಸದರಿ ಬಾಡಿಗೆ ಕರಾರು ಪತ್ರವನ್ನು ನಿ.ಪಿ.೭ ಎಂದು ಗುರುತಿಸಲಾಯಿತು.

( ಈ ಹಂತದಲ್ಲಿ ಸಸಅ ರವರ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲು</u>: ಸಹಾಯಕ ಸರ್ಕಾರಿ ಅಭಿಯೋಜಕರಿಂದ .

ದಿ: 22.09.2015 ರಂದು ನನ್ನ ಮಾಲೀಕತ್ವದ ಅಂಗಡಿ ಮಳಿಗೆಯನ್ನು ಚಾ.ಸಾ.1 ರವರಿಗೆ ಬಾಡಿಗೆ ನೀಡಿದ ಕುರಿತು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ.8 ಎಂದು ಗುರುತಿಸಲಾಯಿತು. ಆರೋಪಿತರು ನನ್ನ ಸಹೋದರರಾದ ಮೇರೆಗೆ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿ ಪರ ಶ್ರೀಯುತ ಎ.ಎಸ್.ಎಸ್. ವಕೀಲರಿಂದ: ಏನು ಇಲ್ಲ

<u>ಮರುವಿಚಾರಣೆ:-ಇಲ್ಲ-</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.